Govt. of Kar., TITLE SHEET FOR JUDGMENT IN SUITS {C.R.P.67}

| | |
|---|---|
| Form No.9 (Civil) Title Sheet for Judgment in suits (R.P.91) | |

ಮೇ: ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ಶಿಗ್ಗಾಂವ

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರ

ಬಿ.ಎ., ಎಲ್‌ಎಲ್ ಬಿ., (ಸ್ಪೇ)

ಹಿರಿಯ ದಿವಾಣಿ ನಾಯಾಧೀಶರು ಮತ್ತು ಜೆ ಎಂ ಎಫ್ ಸಿ ಶಿಗ್ಗಾಂವ

ಅಸಲು ದಾವಾ ನಂ.148/2017
(ಹಳೆಯ ಅಸಲು ದಾವಾ ನಂ.63/2014)

ದಿನಾಂಕ 27 ನೇ ಜುಲೈ 2018

ವಾದಿಯರು:

1. ಶ್ರೀಮತಿ ಗಂಗವ್ವ ಕೋಂ ಶಿವಪ್ಪ ಕೆರೆಕೊಪ್ಪ
ವಯಾ: 50 ವರ್ಷ, ಉ: ಶೇತ್ಕರಿ ವ ಮನೆಗೆಲಸ
ಸಾ: ಹಿರೆಮುಗದೂರ, ಹಾಲಿವಸ್ತಿ ಪುರದ ಓಣಿ ಹಾವೇರಿ.

2. ನೀಲವ್ವ ಕೋಂ ಬಿದ್ದಪ್ಪ ಹೊಸಮನಿ ಉರ್ಫ ಹರಿಜನ
ವಯಾ: 47 ವರ್ಷ, ಉ: ಶೇತ್ಕರಿ ವ ಮನೆಗೆಲಸ
ಸಾ: ಹಿರೆಮುಗದೂರ, ಹಾಲಿವಸ್ತಿ ತಿಮ್ಮಾಪುರ.

(ವಾದಿಯರ ಪರವಾಗಿ ಶ್ರೀ ವಿ ಕೆ ಕೆ ನ್ಯಾಯವಾದಿಗಳು)

ವಿರುದ್ಧ

ಪ್ರತಿವಾದಿಯರು:

1. ಮಲ್ಲವ್ವ ಕೋಂ ಯಲ್ಲಪ್ಪ ಕಾಳಿ
ವಯಾ: 45 ವರ್ಷ, ಉ: ಮನೆಗೆಲಸ,
ಸಾ: ಹಿರೆಮುಗದೂರ.

2. ಮರಿಯಪ್ಪ ತಾನೇ ಸುಳ್ಳು ಹೇಳುವ ದತ್ತಕ ತಂದೆ ದುರಗಪ್ಪ ಕಾಳಿ
ವಯಾ: 25 ವರ್ಷ, ಉ: ಬಿಲ್ಡಿಂಗ ಕಂಟ್ರಾಕ್ಟರ,
ಸಾ: ಹಿರೆಮುಗದೂರ.

(ಪ್ರತಿವಾದಿಯರ ಪರವಾಗಿ ಶ್ರೀ ಎಮ್ ಸಿ ಎಚ್ ನ್ಯಾಯವಾದಿಗಳು)

| | | |
|---|---|---|
| ದಾವೆ ದಾಖಲಾದ ದಿನಾಂಕ | - | 04 -04-2014 |
| ದಾವೆಯ ಸ್ವರೂಪ | - | ಸ್ವತ್ತು ವಿಭಜನೆ |
| ಸಾಕ್ಷಿ ವಿಚಾರಣೆ ಮಾಡಿದ ದಿನಾಂಕ | - | 17-09-2014 |
| ತೀರ್ಪು ಘೋಷಿಸಿದ ದಿನಾಂಕ | - | 27-07-2018 |
| ಒಟ್ಟು ಅವಧಿ | - | ವರ್ಷ 04 ತಿಂಗಳು 03 ದಿನ 23 |

ಹಿರಿಯ ದಿವಾಣಿ ನಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಶಿಗ್ಗಾಂವ.

## ತೀರ್ಪು

ಸದರಿ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಲ್ಲಿ 2/3 ಪಾಲು ಕೇಳಿ ಈ ದಾವೆಯನ್ನು ದಾಖಲಿಸಿರುವರು.

### ವಾದ ಪತ್ರದ ಸಂಕ್ಷಿಪ್ತ ಸಾರಾಂಶಃ

ದಾವಾ ಆಸ್ತಿಗಳ ವರ್ಣನೆ

1. ಹಾವೇರಿ ಜಿಲ್ಲಾ ಸವಣೂರ ತಾಲೂಕ ಹಿರೆಮುಗದೂರ ಗ್ರಾಮದ ಜಮೀನು ಅದರ ವಿವರ

| ರಿ ಸ ನಂ. | ಕ್ಷೇತ್ರ | ಆಕಾರ |
|---|---|---|
| 39/2 ಕ | 05 ಎಕರೆ | 17-65 ಪೈಸೆ |

2. ಹಾವೇರಿ ಜಿಲ್ಲಾ ಸವಣೂರ ತಾಲೂಕ ಹಿರೆಮುಗದೂರ ಗ್ರಾಮ ಪಂಚಾಯತಿ ಹದ್ದಿಯಲ್ಲಿರುವ ಮನೆ ವ ಹಿತ್ತಲು ಅದರ ಪಂಚಾಯತಿ ಆಸ್ತಿ ನಂ. 157/1 ಇದರ ಚಕಬಂದಿ

| | | |
|---|---|---|
| ಪೂರ್ವಕ್ಕೆ | - | ಗುಡ್ಡಪ್ಪ ಕಾಳಿ |
| ಪಶ್ಚಿಮಕ್ಕೆ | - | ನಿಂಗಪ್ಪ ಕಾಳಿ ಇವರ ಮನೆ ವ ಹಿತ್ತಲು |
| ಉತ್ತರಕ್ಕೆ | - | ಸರಕಾರಿ ರಸ್ತೆ |
| ದಕ್ಷಿಣಕ್ಕೆ | - | ರಸ್ತೆ |

<u>ವಾದಿ ಮತ್ತು ಪ್ರತಿವಾದಿಯರ ವಂಶಾವಳಿ</u>

ದುರಗಪ್ಪ ಉರ್ಫ ದೊಡ್ಡ ದುರಗಪ್ಪ - ದ್ಯಾಮವ್ವ ಉರ್ಫ ವಡ್ಡಪ್ಪ

|

| | |

ಗಂಗವ್ವ (1 ನೇ ವಾದಿ) | ನೀಲವ್ವ (2 ನೇ ವಾದಿ) | ಮಲ್ಲವ್ವ (1 ನೇ ಪ್ರತಿವಾದಿ)

|

ಮರಿಯಪ್ಪ (2 ನೇ ಪ್ರವಾದಿ)

2. ಹಿರೆಮುಗದೂರ ಗ್ರಾಮದಲ್ಲಿರುವ ದಾವಾ ಆಸ್ತಿಗಳಾ ದ ಜಮೀನು, ಮನೆ ಮತ್ತು ಹಿತ್ತಲು ಜಾಗೆಯು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮೂಲಪುರುಷನಾದ ದುರ್ಗಪ್ಪ ಕಾಳೆ ಇತನ ತಂದೆಯಿಂದ ಬಂದ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಈತನು ದ್ಯಾಮವ್ವ ಎಂಬುವಳನ್ನು ವಿವಾಹವಾಗಿದ್ದು ಇವರ ದಾಂಪತ್ಯ ಜೀವನದಲ್ಲಿ ಗಂಗವ್ವ, ನೀಲವ್ವ , ಮಲ್ಲವ್ವ ಮತ್ತು ಜೋಗವ್ವ ಅಂತಾ 4 ಜನ ಹೆಣ್ಣುಮಕ್ಕಳು ಜನ್ಮ ತಾಳಿದಬು ಇವರ ಪೈಕಿ ಜೋಗವ್ವ ಎಂಬುವಳು ಮೃತಪಟ್ಟಿದ್ದು, 1 ಮತ್ತು 2 ನೇ ವಾದಿಯರು ತಮ್ಮ ತಂದೆ ತಾಯಿ ಜೊತೆ ಶೇತ್ಕರಿ ಕೆಲಸಗಳನ್ನು ಮಾಡುತ್ತಾ ಬಂದಿದ್ದು 1 ಮತ್ತು 2 ನೇ ಪ್ರತಿವಾದಿಯರು ತಾಯಿ ಮತ್ತು ಮಗನಾಗಿದ್ದು ಇಬ್ಬರೂ ಮಿಲಾಪಿಯಾಗಿ ದಾವಾ ಆಸ್ತಿಗಳನ್ನು ಎತ್ತಿ ಹಾಕಬೇಕೆಂಬ ದುರುದ್ದೇಶದಿಂದ ಹಾಗೂ ಅಪ್ರಮಾಣಿಕ ವ ಬೇಕಾಯ್ದೇಸಿರ ಇರುವ ಹಿತಾಸಕ್ತಿಯನ್ನು ಬಚ್ಚಿಟ್ಟು ವಾದಿಯರ ಬೆನ್ನುಹಿಂದೆ ದಾವೆದ ಆಸ್ತಿಗಳನ್ನು ಅಡವಿಟ್ಟು ಅಪ್ರಮಾಣಿಕವಾಗಿ ಬೇಕಾಯ್ದೆಸ್ಸಿರದಿಂದ ಸಾಲ ಪಡೆದುಕೊಂಡಿದ್ದು ಅದು ವಾದಿಯರ ಹಿಸಾತಕ್ತಿಗೆ ಸಂದಾಯವಾಗಿರುವುದಿಲ್ಲ. ಬ್ಯಾಂಕಿನವರು ಸರಿಯಾದ ಕಾಗದ ಪತ್ರ ವನ್ನು ನೋಡದೇ ಪ್ರತಿವಾದಿಯರೊಂದಿಗೆ ಮಿಲಾಪಿಯಾಗಿ ಸಾಲದ ಹಣ ಮಂಜೂರು ಮಾಡಿರುವರು. ಪ್ರತಿವಾದಿ 1 ಮತ್ತು 2 ರವರು ಮಿಲಾಪಿಯಾಗಿ ದಾವಾ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ದುರುದ್ದೇಶದಿಂದ ಮೃತ ದುರ್ಗಪ್ಪನು 2 ನೇ ಪ್ರತಿವಾದಿಯನ್ನು ದತ್ತಕ ಪಡೆದಿರುವುದಾಗಿ ಎಂದು ಅಪ್ರಮಾಣಿಕ ಬೇಕಾಯ್ದೆ ಸಿರದಿಂದ ಆದರಿಸುತ್ತಿದ್ದು ದತ್ತಕ ಪುತ್ರ ನಿಗೆ ಯಾವುದೇ ಹಕ್ಕುಗಳು ಬರುವುದಿಲ್ಲ . ವಾದಿ ಪ್ರತಿವಾದಿಯರ ಮೂಲ ವಂಶಸ್ತರು ವಾಲಿಕಾರಿಕೆ ಅಂತಾ ಶೇತಸನದಿಯು ಬಾಂಬೆ ಸರ್ಕಾರದಿಂದಲೂ ಮಾಡುತ್ತಿದ್ದು ಈ ಕಾರಣಕ್ಕಾಗಿ ಶೇತಸನದಿ ಚಾಕರಿ 18 ಎಕರೆಯ

ಜಮೀನನ್ನು ಹೊಂದಿರುತ್ತಾರೆ. ರಿ ಸ ನಂ.39/2 ಕ ಜಮೀನು ಮೃತ ದುರ್ಗಪ್ಪನ ಸ್ವಂತ ದುಡಿಮೆಯಿಂದ ಖರೀದಿ ಹಿಡಿದಿರುವ ಜಮೀನು ಎಂಬ ಸಂಗತಿ ನಿಜವಿರುವುದಿಲ್ಲ. ಶೇತಸನದಿ ಚಾಕರಿ ಜಮೀನಿನ ಉತ್ಪನ್ನದಿಂದ ಈ ಜಮೀನನ್ನು ದುರ್ಗಪ್ಪ ಖರೀದಿ ಮಾಡಿರುವನು. ಕುಟುಂಬದ ಮೂಲ ಪುರುಷ ಮರಿಯಪ್ಪ ಹಿರೇಮುಗದೂರ ಗ್ರಾಮದ ರಿ ಸ ನಂ.44 ರ ಜಮೀನು ವಾರಸಾನತೆಯಿಂದ ಬಂದಿದ್ದು ಸದರಿ ರಿ ಸ ನಂ.44 ಮೂಲಪುರುಷ ಮರಿಯಪ್ಪನಿಗೆ ಗ್ರಾಮದ ಚಾಕರಿ ಮಾಡುವ ಬಗ್ಗೆ 1936 ರಲ್ಲಿ ಹಿರೇಮುಗದೂರು ಗ್ರಾಮದಲ್ಲಿ ಡ ಶ ನಂ.254 ರಲ್ಲಿ ಕಂದಾಯ ಅಧಿಕಾರಿಗಳು ದಾಖಲೆಗಳಲ್ಲಿ ಎಂಟ್ರಿಯಾಗಿದ್ದು ಆದ್ದರಿಂದ ರಿ ಸ ನಂ.44 ರ ಜಮೀನು ವಂಶಪರಂಪರೆಯಾಗಿ ಮೂಲಪುರುಷನಿಂದ ಬಂದಿರುವುದು. ಕುಟುಂಬ ಮೂಲಪುರುಷ ಮರಿಯಪ್ಪನಿಗೆ ದೊಡ್ಡದುರ್ಗಪ್ಪ, ದ್ಯಾಮಪ್ಪ ನಿಂಗಪ್ಪ, ಮತ್ತು ಸಣ್ಣದುರ್ಗಪ್ಪ ಎಂಬ 4 ಜನ ಮಕ್ಕಳಿದ್ದು ಇವರಲ್ಲಿ ದೊಡ್ಡದುರ್ಗಪ್ಪ ಹಿರಿಯ ಮಗನಿದ್ದು ಘರಾಣೆದ ಯಾವತ್ತೂ ವ್ಯವಹಾರಗಳನ್ನು ಮಾಡುತ್ತಿರುವುದರಿಂದ ರಿ ಸ ನಂ.39/2 ಬ/1 ಮತ್ತು 39/2 ಬ/2 ಇವುಗಳನ್ನು ದೊಡ್ಡದುರ್ಗಪ್ಪ 1960 ನೇ ಇಸವಿಯಲ್ಲಿ ಖರೀದಿಸಿದ್ದು ಆ ಪ್ರಕಾರ 1963 ರಲ್ಲಿ ಪೋಟ ಹಿಸ್ಸಾ ನಂ.1908 ಅಂತಾ ದಾಖಲಾಗಿದ್ದು ಆ ಪ್ರಕಾರ ದುರ್ಗಪ್ಪನಿಗೆ ರಿ ಸ ನಂ.39/2 ಕ ಕ್ಷೇತ್ರ 5 ಎಕರೆಯ ದಾವಾ ಜಮೀನು ನಮೂದಾಗಿದ್ದು ತದನಂತರ ಘರಾಣೆದ ರಿ ಸ ನಂ.44 ರ ಜಮೀನು ಮೈಸೂರು ವಿಲೇಜ ಆಫಿಸ ಆವಾಲೇಶನ ಕಾಯ್ದೆ 1961 ರ ಪ್ರಕಾರ ಶೇತಸನದಿ ಇನಾಮು ಜಮೀನು ಹಿರೇಮುಗದೂರ ಗ್ರಾಮದ ಡ ಶ ನಂ.1003 ರಲ್ಲಿ ಎಂಟ್ರಿಯಾಗಿದ್ದು ನಂತರ 1970 ರಲ್ಲಿ ಮೆ. ಅಸಿಸ್ಟಂಟ್ ಕಮಿಶನರ ಸವಣೂರ ಇವರ ಹುಕುಂ ಪ್ರಕಾರ ಕುಟುಂಬದ ಮ್ಯಾನೇಜರ ಆದ ದುರ್ಗಪ್ಪ ಮರಿಯಪ್ಪ ಮಾದರ ಉರ್ಫ ಕಾಳಿ ಅನ್ನುವವನ ಹೆಸರಿನಲ್ಲಿ ಹಳೆಯ ಶರ್ತ ಪ್ರಕಾರ ಗ್ರಾಮದ ದಫ್ತರ ಡ ಶ ನಂ.1179 ರಲ್ಲಿ ದಾಖಲಾಗಿರುವುದು. ತದನಂತರ ದುರ್ಗಪ್ಪ ಮತ್ತು ಆತನ ಸಹೋದರರು ಘರಾಣೆಯಲ್ಲಿ ನಡುವೆ ಹಿಸ್ಸೆಯಾಗಿ ಆ ಪ್ರಕಾರ ವಾಟ್ನಿ ಪತ್ರ ಮಾಡಿಕೊಂಡು ರಿ ಸ ನಂ44 ಮತ್ತು ಅದರಿಂದ ಬಂದ ಉತನ್ನದಿಂದ ದುರ್ಗಪ್ಪ ನ ಹೆಸರಿನಲ್ಲಿ ಖರೀದಿ ಹಿಡಿದ ರಿ ಸ ನಂ.39/1 ಅ ದಾವಾದ ಆಸ್ತಿ ರಿ ಸ ನಂ.39/2 ಕ ಜಮೀನುಗಳನ್ನು ಸೇರಿಸಿ ದಿನಾಂಕ 12-04-1984 ರಲ್ಲಿ ಹಿಸ್ಸೆ ಮಾಡಿಕೊಂಡಿದ್ದು ಆ ಪ್ರಕಾರ ಹಿರೇಮಗದೂರು ಗ್ರಾಮದ ದಫ್ತರ ಡ ಶ ನಂ.1546 ರಲ್ಲಿ ಎಂಟ್ರಿಯಾಗಿದ್ದು ಅದನ್ನು ಸಂಬಂ ದಪಟ್ಟಂತೆ ಕಂದಾಯ ಅಧಿಕಾರಿಗಳು ಮಂಜೂರು ಸಹ ಮಾಡಿದ್ದು ಕಾರಣ ರಿ ಸ ನಂ.39/2 ಕ ಈ ಆಸ್ತಿ ಪ್ರತಿವಾದಿಯರು ಆಧರಿಸುವಂತೆ ದುರ್ಗಪ್ಪನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ ಆಸ್ತಿ ಯಾಗಿರುವುದಿಲ್ಲ. ದುರ್ಗಪ್ಪನು ಕೇವಲ ಶೇತ್ಕರಿ ಉದ್ಯೋಗ ಮಾಡುತ್ತಿದ್ದು ಆತನು ಬೇರೆ ಯಾವ ಉದ್ಯೋಗ ಮಾಡುತ್ತಿರಲಿಲ್ಲ ಆದ್ದರಿಂದ ಲಿಖಿತ ಪತ್ರದಲ್ಲಿ ಬರೆದ ಸಂಗತಿಗಳು ನಿಜವಿರುವುದಿಲ್ಲ.

3. ವಾದಿಯರು ವಾದ ಪತ್ರದಲ್ಲಿ ಮುಂದುವರೆದು ಹೇಳುವುದೇನೆಂದರೆ ದುರ್ಗಪ್ಪ ಉರ್ಫ ದೊಡ್ಡದುರ್ಗಪ್ಪ 1992 ರಿಂದಲೂ ತೀವ್ರಸ್ವರೂಪದ ಮೆದುಳು ಜ್ವರದಿಂದ ಬಳಲುತ್ತಿದ್ದು ಆತನು ಜ್ಞಾಪಕ ಶಕ್ತಿ ಕಳೆದುಕೊಂಡಿದ್ದು ಆತ ದೈಹಿಕವಾಗಿ ಅಸ್ತವ್ಯಸ್ತನಾಗಿದ್ದು ತಾನು ಏನು ಮಾಡುತ್ತಿದ್ದನು ಎನ್ನುವುದರ ಬಗ್ಗೆ ತಿಳಿಯುತ್ತಿರಲಿಲ್ಲ. ಹೀಗಾಗಿ ಆತನ ಯಾವತ್ತೂ ಚಾಕರಿಯನ್ನು 2 ನೇ ವಾದಿ ನೀಲವ್ವ ತನ್ನ ಮನೆಯಲ್ಲಿಟ್ಟುಕೊಂಡು ಮಾಡಿದ್ದು ಕೊನೆಗೆ ದುರ್ಗಪ್ಪನಿಗೆ ಜ್ಞಾಪಕ ಶಕ್ತಿ ಬಂದಿರುವುದಿಲ್ಲ. ದಿನಾಂಕ 06-09-2001 ರಲ್ಲಿ ಮೃತಪಟ್ಟಿರುವನು. ಆದ್ದರಿಂದ ದಾವಾ ಅಸ್ತಿಯನ್ನು ವಾದಿಯರು, ಪ್ರತಿವಾದಿ 1 ರವರ ಸಮೂಹಿಕ ಮಾಲ್ಕಿ ವಹಿವಾಟಿಯನ್ನಿಟ್ಟುಕೊಂಡು ಉಫಬೋಗ ಮಾಡುತ್ತಾ ಬಂದಿದ್ದು ವಾದಿಯರು ಮತ್ತು ಪ್ರತಿವಾದಿ 1 ರವರು ಮಾತ್ರ ಸಮೀಪದ ವಾರಸುದಾರರನ್ನಾಗಿ ಬಿಟ್ಟು ದುರ್ಗಪ್ಪ ಮೃತಪಟ್ಟಿರುವನು.. ವಾದಿಯರು ಯಾವುದೇ ಓದು ಬರಹ ಬಲ್ಲವರಿರುವುದಿಲ್ಲ ಮತ್ತು ಶಾಲೆ ಸಹ ಕಲಿತಿರುವುದಿಲ್ಲ. ಬಹಳ ಬೋಳೆ ಸ್ವಭಾವದವರಿದ್ದು 1 ನೇ ಪ್ರತಿವಾದಿಯರು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು 2 ನೇ ವಾದಿಯು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು ಇವರು ವ್ಯವಹಾರ ಚತುರರಿದ್ದು ಮತ್ತು ದುರ್ತಾಲೋಚನೆ ಉಳ್ಳವರು ಸಮಯ ಸಾಧಕಾರು ಹಾಗೂ ರಾಜಕೀಯ ಪ್ರಭಾವಿತರಿದ್ದು ವಾದಿಯರು ಅಶಿಕ್ಷಿತರಿರುವುದರಿಂದ ಅದರ ದುರುಪಯೋಗ ಪಡೆದುಕೊಂಡು ರೆವಿನ್ಯೂ ಅಧಿಕಾರಿಗಳೊಂದಿಗೆ ಮಿಲಾಪಿ ಮಾಡಿಕೊಂಡು 2 ನೇ ಪ್ರತಿವಾದಿ ದುರ್ಗಪ್ಪನ ದತ್ತಕ ಮಗನೆಂದು ಅಪ್ರಮಾಣಿಕಾಗಿ ಬೇಕಾಯ್ದೆಸಿರ ಸುಳ್ಳು ಆಧರಿಸಿ ವಾದಿಯರ ಬೆನ್ನು ಹಿಂದೆ ಖೊಟ್ಟಿ ಎಂಟ್ರಿ ಮಾಡಿಕೊಂಡಿದ್ದು ಈ ಸಂಗತಿಯು ವಾದಿಯರಿಗೆ ಇತ್ತೀಚೆಗೆ ತಿಳಿದು ಬಂದಿದ್ದು ಈ ಹಕ್ಕು ಬದಲಾವಣೆಯು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ. ದಾವಾ ಆಸ್ತಿಯನ್ನು ಎತ್ತಿ ಹಾಕುವ ಸಲುವಾಗಿ ಅಪ್ರಮಾಣಿಕವಾಗಿ ದಾವಾದ ಜಮೀನನ್ನು ವಿಜಯಾಬ್ಯಾಂಕ ಹಿರೇಮುಗದೂರು ಮತ್ತು ದುರ್ಗಾಂಬ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಒತ್ತಿ ಹಾಕಿ ಸಾಲದ ಬೊಜಾಗಳನ್ನು ದಾವಾದ ಆಸ್ತಿಯ ಕಂಬೈಂಡ ಉತಾರದಲ್ಲಿ ಬೇಕಾಯ್ದೆಸಿರ ನಮೂದು ಮಾಡಿಸಿದ್ದು ಅದು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ. ಪ್ರತಿವಾದಿಯರು ವೈಕಲ್ಪಿಕವಾಗಿ 2 ನೇ ಪ್ರತಿವಾದಿ ಮೃತ ದುರ್ಗಪ್ಪನ ದತ್ತಕ ಮಗನೆಂದು ನ್ಯಾಯಾಲಯದಲ್ಲಿ ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ 1956 ರ ಕಲಂ 12 ಮತ್ತು 13 ರ ಪ್ರಕಾರ ಸಿದ್ದಪಡಿಸಿದಲ್ಲಿಯೂ ಸಹ ದತ್ತಕ ಪತ್ರದಲ್ಲಿ ದತ್ತಕ ಮಗನಿಗೆ ಯಾವ ಆಸ್ತಿ ಹೋಗಬೇಕು ಅಂತಾ ಎಲ್ಲಿಯೂ ನಮೂದಿಸಿರುವುದಿಲ್ಲ. ಕಾರಣ ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ. ದಾವಾ ಅಸ್ತಿಯಲ್ಲಿ ವಾದಿಯರಿಗೆ ಮತ್ತು 1 ನೇ ಪ್ರತಿವಾದಿಗೆ ಸಾಮೂಹಿಕವಾಗಿ ತಲಾ 1/3 ಹಿಸ್ಸೆ ಇದ್ದು ದಾವಾ ಆಸ್ತಿಯ ವಾದಿಯರ 2/3 ಹಿಸ್ಸೆಯನ್ನು ಪ್ರತ್ಯೇಕಿಸಿ ಪ್ರತ್ಯಕ್ಷ ಕಬ್ಜಾ ಕೊಡಲು

ಪ್ರತಿವಾದಿಯರು ದಿನಾಂಕ 01-02-2014 ರಂದು ನಿರಾಕರಿಸಿರುವುದರಿಂದ ಈ ದಾವಾಗೆ ವ್ಯಾಜ್ಯ ಕಾರಣ ಉಂಟಾಗಿರುವುದಾಗಿ ಎಂದು ಹೇಳಿ ದಾವಾ ಆಸ್ತಿಯನ್ನು ದಾಖಲು ಮಾಡಿ ವಾದ ಪತ್ರದಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿಮಾಡಬೇಕಂದು ವಿನಂತಿಸಿಕೊಂಡಿರುವರು.

4. ಈ ದಾವೆಯನ್ನು ದಾಖಲು ಮಾಡಿದ ನಂತರ ದಾವಾ ಸಮನ್ಸನ್ನು ಪ್ರತಿವಾದಿ 1 ಮತ್ತು 2 ರವರಿಗೆ ಹೊರಡಿಸಲಾಗಿ ಅವರು ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಲಿಖಿತ ಪತ್ರ ವನ್ನು ಸಲ್ಲಿಸಿರುವರು

<u>ಲಿಖಿತ ಪತ್ರ ದ ಸಂಕ್ಷಿಪ್ತ ಸಾರಾಂಶ</u>

5. ವಾದಿಯರು ಮತ್ತು ಪ್ರತಿವಾದಿಯರ ಸಂಬಂದದ ಬಗ್ಗೆ ನಿರಾಕರಿಸಿರುವುದಿಲ್ಲ. ಆದರೆ ವಾದ ಪತ್ರದ ಖಂಡಿಕೆ 2 ರಿಂದ 11 ರಲ್ಲಿನ ಸಂಗತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುವರು. ವಾದ ಪತ್ರದಲ್ಲಿ ವಾದಿಯರು ತೋರಿಸಿರುವ ವಂಶಾವಳಿಯನ್ನು ಪ್ರತಿವಾದಿಯರು ಯಾವುದೇ ಕಾರಣಕ್ಕೂ ಒಪ್ಪವುದಿಲ್ಲ. ದುರ್ಗಪ್ಪ ಹಾಗೂ ದ್ಯಾಮವ್ವ ಇವರ ದಾಂಪತ್ಯ ಜೀವನದಲ್ಲಿ ಗಂಗವ್ವ , ನೀಲವ್ವ ಮತ್ತು ಮಲ್ಲವ್ವ ಎಂಬ ಮಕ್ಕಳು ಜನ್ಮ ತಾಳಿದ್ದು ಇವರನ್ನು ಮೃತ ದುರ್ಗಪ್ಪ ಮತ್ತು ದ್ಯಾಮವ್ವ ವಿವಾಹ ಮಾಡಿಕೊಟ್ಟಿದ್ದು ಇವರ ಜೀವಿತ ಅವಧಿಯಲ್ಲಿ ತಮ್ಮ ವಂಶ ಅಭಿವೃದ್ಧಿಗೊಸ್ಕರ 1 ನೇ ಪ್ರತಿವಾದಿಯ ಜನಕ ಮಗನಾದ 2 ನೇ ಪ್ರತಿವಾದಿಯನ್ನು ತಮ್ಮ ಪದ್ದತಿಯ ಪ್ರಕಾರ ದಿನಾಂಕ 06-07-2008 ರಂದು ಬುಧವಾರದ ದಿವಸ ಶುಭ ಮುಹುರ್ತದಲ್ಲಿ ದತ್ತಕ ವಿಧಿವಿಧಾನದ ಪ್ರಕಾರ ದತ್ತಕ ಪಡೆದುಕೊಂಡಿದ್ದು ದಿನಾಂಕ 08-07-1988 ರಂದು ದತ್ತಕ ಪತ್ರ ವನ್ನು ಸವಣೂರು ಉಪ ನೊಂದಣಿ ಕಚೇರಿಯಲ್ಲಿ ನೊಂದಾಯಿಸಿದ್ದು ಆ ದತ್ತಕ ತೆಗೆದುಕೊಂಡಾಗಿನಿಂದಲೂ 2 ನೇ ಪ್ರತಿವಾದಿಯು ಮೃತ ದುರ್ಗಪ್ಪ ಮತ್ತು ದ್ಯಾಮವ್ವ ಇವರ ಜನಕ ಮಗನಂತೆ ವಾಸ ಮಾಡುತ್ತಾ ಸದರಿಯವರನ್ನು ಜೋಪಾನ ಮಾಡುತ್ತಾ ಬಂದಿದ್ದು ದುರ್ಗಪ್ಪನು ದಿನಾಂಕ 16-09-2001 ರಂದು ದತ್ತಕ ಮಗನನ್ನು ವಾದಿಯರು ಹಾಗೂ 1 ನೇ ಪ್ರತಿವಾದಿಯನ್ನು ಬಿಟ್ಟು ಮೃತಪಟ್ಟಿದ್ದು ದ್ಯಾಮವ್ವ ದಿನಾಂಕ 24-09-2005 ರಂದು ಮೃತಪಟ್ಟಿರುವರು. ದಾವಾ ಆಸ್ತಿಯನ್ನು ದುರ್ಗಪ್ಪ ಮತ್ತು ದ್ಯಾಮವ್ವ ಇವರ ಜೀವಿತ ಅವಧಿಯಲ್ಲಿ ಅವರು ಯಾವತ್ತೂ ಶೇತ್ಕರಿ ಕೆಲಸ ಮಾಡುತ್ತಾ ಬಂದಿದ್ದು ಆ ಜಮೀನನ್ನು ದಿನಾಂಕ 22-04-1960 ನೇ ಸಾಲಿನಲ್ಲಿ ರೂ.2,000-00 ಗಳಿಗೆ ರಿ ಸ ನಂ.39/2 ಕ ವಿಸ್ತೀರ್ಣ 5 ಎಕರೆಯ ಜಮೀನನ್ನು ಹನುಮಂತಾಚಾರ್ ವೆಂಕಟರಮಣಾಚಾರ್ಯ ಪಾಂಡುರಂಗಿ ಇವರಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಿ ಅಂದಿನಿಂದ ಆ ಆಸ್ತಿಯ ಪ್ರತ್ಯೆಕ್ಷ ಕಬ್ಜಾವಹಿವಾಟಿಯನ್ನು ಹೊಂದಿ ಉಪಭೋಗ ಮಾಡುತ್ತಾ ಬಂದಿದ್ದು ಈ ಆಸ್ತಿಯನ್ನು ದುರ್ಗಪ್ಪ ತನ್ನ ವಯಕ್ತಿಕ ದುಡಿಮೆಯಿಂದ ಖರೀದಿಸಿದ್ದು ಇದು ಆತನ ಸ್ವಯಾರ್ಜಿತ ಆಸ್ತಿಯಾಗಿದ್ದು ದಾವಾ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಕ್ಕು ಹಿತಸಂಬಂದ ಇರುವುದಿಲ್ಲ. ಪಂಚಾಯತಿ ಆಸ್ತಿ ನಂ.157/1 ಮನೆ ವ ಹಿತ್ತಲು ಆಸ್ತಿಯು ಸರ್ಕಾರದ ಆಸ್ತಿಯಾಗಿದ್ದು ಇದನ್ನು ಸರ್ಕಾರದವರು

ನಿರಾರ್ಶಿತರಿಗೆ ಹಾಗೂ ಯಾವುದೇ ಮನೆ ಜಾಗೆ ಇರದವರಿಗೆ ನೀಡಿರುವಂತ ಆಸ್ತಿಯಾಗಿದ್ದು ಈ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಕ್ಕು ಹಿತಸಂಬಂಧ ಇರುವುದಿಲ್ಲ. 2 ನೇ ಪ್ರತಿವಾದಿಯನ್ನು ದತ್ತಕ ಪಡೆದಾಗಿನಿಂದಲೂ ದಾವಾ ಆಸ್ತಿಗಳನ್ನು ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿ ಇಟ್ಟುಕೊಂಡಿರುವನು. ದಿನಾಂಕ 16-09-2001 ರಂದು ದುರ್ಗಪ್ಪ ಮೃತಪಟ್ಟನಂತರ ಆತನ ಅಂತ್ಯಕ್ರಿಯೆ ಹಾಗೂ ಯಾವತ್ತೂ ದಿನಕರ್ಮವನ್ನು 2 ನೇ ಪ್ರತಿವಾದಿಯೆ ಮಾಡುತ್ತಾ ಬಂದಿದ್ದು ಆ ಕಾರಣದಿಂದ 2 ನೇ ಪ್ರತಿವಾದಿ ಮೇಲಿನ ನಂಬಿಕೆ ವಿಶ್ವಾಸದಿಂದ ತನ್ನ ಸ್ವಯಾರ್ಜಿತ ಆಸ್ತಿಯಾದ ರಿ ಸ ನಂ.32/2 ಕ, ವಿಸ್ತೀರ್ಣ 5 ಎಕರೆಯ ಜಮೀನು ಹಾಗೂ ಹಿರೆಮುಗದೂರು ಗ್ರಾಮ ಪಂಚಾಯತಿಯ ಆಸ್ತಿ ನಂ.157 ಹಾಗೂ 157 ಎ ಅವುಗಳನ್ನು ದಿನಾಂಕ 04-05-1999 ರಂದು ಸಾಕ್ಷಿದಾರರ ಸಮಕ್ಷಮ ನೊಂದಾಯಿತ ಮೃತ್ಯು ಪತ್ರ ಮಾಡಿಕೊಟ್ಟಿದ್ದು ಆ ನಾತೆಯಿಂದ 2 ನೇ ಪ್ರತಿವಾದಿಯು ದಾವಾದ ಆಸ್ತಿಗಳಿಗೆ ಸಂಪೂರ್ಣ ಮಾಲೀಕನಾಗಿದ್ದು ದಾವಾ ಅಸ್ತಿಯಲ್ಲಿ ವಾದಿಯರಿಗೆ ಯಾವುದೇ ರೀತಿಯ ಹಕ್ಕು ವ ಹಿತಸಂಬಂದ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟಂತೆ 2 ನೇ ಪ್ರತಿವಾದಿಯ ಹೆಸರು ದಾಖಲಾದ ಡ ನಂ.1775 ನ್ನು ಮಾನ್ಯ ಉಪವಿಭಾಗಾಧಿಕಾರಿಗಳು ಸವಣೂರು ಇವರ ನ್ಯಾಯಾಲಯದಲ್ಲಿ ಆರ್ ಟಿ ಎಸ್ ಎ ಪಿ ಎಸ್ ಆರ್ 132/97-98 ದಾಖಲು ಮಾಡಿದ್ದು ಈ ಮೇಲ್ಮನವಿಯು ದಿನಾಂಕ 07-01-2000 ರಂದು ವಜಾಗೊಂಡಿರುವುದು. ವಾದಿಯರು ದತ್ತಕ ಪತ್ರ ವನ್ನು ಅವಧಿಯೊಳಗಾಗಿ ಪ್ರಶ್ನಿಸಿರುವುದಿಲ್ಲ ಈ ದಾವೆಗೆ ಅವಶ್ಯಕ ಪಕ್ಷಗಾರರನ್ನು ಸೇರ್ಪಡೆ ಮಾಡಿರುವುದಿಲ್ಲ. ದಾವಾ ಆಸ್ತಿಯ ಕಂಬೈಂಡ ಉತಾರದಲ್ಲಿ ಎಂಟ್ರಿಯಾಗಿರತಕ್ಕಂತ ಸಾಲದ ಬೊಜಾವು ವಾದಿಯರಿಗೆ ಬಂಧನಾಕರಿಯಾಗಿರುವುದಿಲ್ಲ ಎಂಬ ಸಂಗತಿ ನಿಜವಿರುವುದಿಲ್ಲ. ಈ ದಾವೆ ದಾಖಲು ಮಾಡಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ವಾದಿಯರು ತಮಗೆ ಅನುಕೂಲ ಆಗುವ ರೀತಿಯಲ್ಲಿ ದಾವಾದ ಕಾರಣವನ್ನು ಹುಟ್ಟಿಸಿಕೊಂಡು ದಾವೆಯನ್ನು ದಾಖಲು ಮಾಡಿದ್ದು ರೂ.25,000-00 ಪರಿಹಾರಾತ್ಮಕ ಖರ್ಚನೊಂದಿಗೆ ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

6. ಈ ಮೇಲಿನ ವಾದ ಮತ್ತು ಪ್ರತಿವಾದ ಪತ್ರ ಆಧಾರದ ಮೇರೆಗೆ ಹೆಚ್ಚುವರಿ ಹಿರಿಯ ಶ್ರೇಣಿ ಹಾವೇರಿ ನ್ಯಾಯಾಲಯವರು ಈ ವಿವಾದಾಂಶಗಳನ್ನು ರಚಿಸಿರುವರು

**ISSUES**

1. Whether plaintiffs prove that suit schedule properties are ancestral joint family properties of plaintiffs and defendants?

2. Whether plaintiffs proves that they are in possession and enjoyment over the suit schedule properties?

3. Whether plaintiffs prove that no partition by metes and bounds is effected between them so far?

4. Whether plaintiffs prove that they have got 2/3 joint share in the suit schedule properties?

5. Whether defendants prove that suit of the plaintiffs is bad for non - joinder of necessary parties?

6. Whether the defendants prove that suit of the plaintiffs is barred by law of limitation?

7. Whether plaintiffs are entitled for the relief of partition and separate possession as sought for in the plaint?

8. what order or decree?

**ADDITIONAL ISSUES**

1. Whether defendant No.2 proves that he has succeeded suit schedule properties bearing survey No.32/2c measuring 5 Acre and JPC No.157 and 157A of Hiremagadur village through registered will deed dated 04-05-1999 by virtue of adopted son of DoddaDurgappa?

7. ವಾದಿಯರ ಪರವಾಗಿ 1 ನೇ ವಾದಿಯನ್ನು ಪಿಡಬ್ಲೂ -1 ಎಂದು ವಿಚಾರಣೆಗೊಳಪಡಿಸಿಕೊಂಡು ನಿಪಿ-1 ರಿಂದ 27 ದಾಖಲೆಗಳನ್ನು ಗುರುತಿಸಿಕೊಂಡಿರುವರು. ಪ್ರತಿವಾದಿಯರಿಗೆ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ತಮ್ಮ ಪರವಾಗಿ ಯಾವುದೇ ಸಾಕ್ಷಿಗಳನ್ನು ವಿಚಾರಣಗೊಳಪಡಿಸಿಕೊಂಡಿರುವುದಿಲ್ಲ ಮತ್ತು ದಾಖಲಗಳನ್ನು ಸಹ ಗುರುತಿಸಿಕೊಂಡಿರುವುದಿಲ್ಲ.

8. ವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು .

9. ಮೇಲ್ಕಂಡ ವಿವಾದಾಂಶಗಳಿಗೆ ಕೆಳಕಂಡಂತೆ ಉತ್ತರಿಸಲಾಗಿದೆ

ವಿವಾದಾಂಶಃ 1 - ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶಃ 2 - ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶಃ 3 - ಸಕಾರಾತ್ಮಕವಾಗಿ

ವಿವಾದಾಂಶಃ 4 - ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶಃ 5 - ನಕಾರಾತ್ಮಕವಾಗಿ

ವಿವಾದಾಂಶಃ 6 - ನಕಾರಾತ್ಮಕವಾಗಿ

ವಿವಾದಾಂಶಃ 7 - ಭಾಗಶಃ ಸಕಾರಾತ್ಮಕವಾಗಿ

ಹೆಚ್ಚುವರಿವಿವಾದಾಂಶಃ 1 - ನಕಾರಾತ್ಮಕವಾಗಿ

ವಿವಾದಾಂಶಃ 8 - ಅಂತಿಮ ಆದೇಶದಂತೆ

## ಕಾ ರಣಗಳು

10. ವಿವಾದಾಂಶ 1 ರಿಂದ 3 - ಈ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ವಿವಾದಾಂಶಗಳನ್ನು ರುಜುವಾತುಪಡಿಸುವ ಭಾರವು ವಾದಿಯರ ಮೇಲಿದು ವಾದಿಯರ ವಾದ ಪತ್ರವದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ 1 ನೇ ವಾದಿಯನ್ನು ಪಿಡಬ್ಲೂ- 1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು ಇವರು ತಮ್ಮ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನೇ ಯಥಾವತ್ತಾಗಿ ಪುನರುಚ್ಚರಿಸುತ್ತಾ ವಾದ ಪತ್ರದ ವಂಶಾವಳಿಯಲ್ಲಿ ತೋರಿಸಿರತಕ್ಕಂತ ಮೂಲ ಪುರುಷ ದುರ್ಗಪ್ಪ ಕಾಳಿ ಇತನಿಗೆ ವಾಡಿಕೆಯಲ್ಲಿ ದೊಡ್ಡದುರ್ಗಪ್ಪ ಮತ್ತು ವಡದಪ್ಪ ಅಂತಾ ಕರೆಯುತ್ತಿದ್ದು ಇತನ ವಿವಾಹ ದ್ಯಾಮವ್ವಳ ಜೊತೆ ಆಗಿದ್ದು ಇವರ ವೈವಾಹಿಕ ಜೀವನದಲ್ಲಿ 4 ಜನ ಹೆಣ್ಣುಮಕ್ಕಳಿಗೆ ಜನ್ಮ ನೀಡಿದ್ದು ಅವರಲ್ಲಿ ಜೋಗವ್ವ ಎಂಬ ಹೆಣ್ಣು ಮಗು ಲಗ್ನವಾಗದೇ ತೀರಿಕೊಂಡಿದ್ದು ತಾನು, ವಾದಿ2, ಪ್ರತಿವಾದಿ 1 ವಯಸ್ಸಿಗೆ ಬಂದಾಗಿನಿಂದಲೂ ದಾವಾ ಆಸ್ತಿ ಜಮೀನಿನ ಯಾವತ್ತೂ ಶೇತ್ಕರಿ ಕೆಲಸವನ್ನು ತಮ್ಮ ತಂದೆ ತಾಯಿ ಜೊತೆ ಮಾಡುತ್ತಾ ಬಂದಿದ್ದು ಈ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ದಾವಾ ಆಸ್ತಿಯಲ್ಲಿ ವಾದಿಯರಿಗೆ ಹಕ್ಕು ಸಿಗಬಾರದೆಂಬ ಉದ್ದೇಶದಿಂದ ವಿಜಯಾ ಬ್ಯಾಂಕ ಹಿರೆಮುಗದೂರ ಮತ್ತು ದುರ್ಗಂಬಾ ಪ್ರಾಥಮಿಕ ಸಹಕಾರಿ ಸಂಘ ಹಿರೆಮುಗದೂರ

ಇವರಲ್ಲಿ ಪ್ರತಿವಾದಿ 1 ಮತ್ತು 2 ರವರು ಅಪ್ರಮಾಣಿಕವಾಗಿ ಒತ್ತಿ ಹಾಕಿ ಹಣ ಪಡೆದುಕೊಂಡಿದ್ದು ಅದು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ.

12. ಪಿಡಬ್ಲೂ-1 ರವರು ಮುಂದುವರೆದು ನುಡಿಯುವುದೇನೆಂದರೆ, ದಾವಾ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರು ಎತ್ತಿ ಹಾಕಬೇಕೆಂಬ ಉದ್ದೇಶದಿಂದ 2 ನೇ ಪ್ರತಿವಾದಿಯನ್ನು ಮೃತ ದುರ್ಗಪ್ಪ ಮತ್ತು ದ್ಯಾಮವ್ವಳ ದತ್ತಕ ಮಗಳೆಂದು ಅಪ್ರಮಾಣಿಕವಾಗಿ ಬೇಕಾಯ್ದೇಶಿರದಿಂದ ಆಧಿರಿಸುತ್ತಿದ್ದು ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಗೆ ಯಾವುದೆ ಹಕ್ಕು ಇರುವುದಿಲ್ಲ ದಾವಾ ಆಸ್ತಿಯು ದುರ್ಗಪ್ಪನ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುವ ಆಸ್ತಿಯಾಗಿರುವುದಿಲ್ಲ ವಾದಿಯರ ಕುಟುಂಬದ ವಂಶಸ್ಥರಿಗೆ ವಾಲಿಕಾರಿಕೆಯಿಂದ 18 ಎಕರೆ ಶೇತಸನದಿ ಜಮೀನು ಹೊಂದಿದ್ದು ಆ ಜಮೀನಿನಿಂದ ಬಂದ ಆದಾಯದಿಂದ ದಾವಾ ಆಸ್ತಿಯನ್ನು ಕುಟುಂಬದ ಹಿರಿಯ ಮಗನಾದ ದುರ್ಗಪ್ಪನ ಹೆಸರಿನಲ್ಲಿ ಖರೀದಿ ಮಾಡಿದ್ದು ಒಕ್ಕಲುತನ ಬಿಟ್ಟು ಬೇರೆ ಯಾವುದೇ ಉದ್ದೋಗ ಮಾಡುತ್ತಿರಲಿಲ್ಲ ಆತ 1992 ನೇ ಸಾಲಿನಲ್ಲಿ ತೀವ್ರ ಸ್ವರೂಪದ ಮೆದುಳು ಜ್ವರದಿಂದ ಬಳಲುತ್ತಿದ್ದು ಆತನಿಗೆ ಜ್ಞಾಪಕ ಶಕ್ತಿ ಕಳೆದುಕೊಂಡಿದ್ದು ಆತ ದೈಹಿಕವಾಗಿ ಅಸ್ವಸ್ತನಾಗಿದ್ದು ಆತನು ಏನು ಮಾಡುತ್ತಿದ್ದ ಎಂದು ಸಹ ತಿಳಿಯುತ್ತಿರಲಿಲ್ಲ ಹೀಗಾಗಿ ಆತನ ಯಾವತ್ತೂ ಚಾಕರಿಯನ್ನು 2 ನೇ ವಾದಿಯು ತನ್ನ ಮನೆಯಲ್ಲಿಟ್ಟುಕೊಂಡು ಚಾಕರಿ ಮಾಡಿದ್ದು ದುರ್ಗಪ್ಪನಿಗೆ ಜ್ಞಾಪಕ ಶಕ್ತಿ ಬಂದಿರುವುದಿಲ್ಲ. ಆತನ ಸ್ಮರಣ ಶಕ್ತಿ ಇಲ್ಲದೆ ದಿನಾಂಕ 06-09-2001 ರಂದು ಮೃತಪಟ್ಟಿರುವನು. ಅಂದಿನಿಂದ ದಾವಾ ಆಸ್ತಿಯು ವಾದಿಯರ ಮತ್ತು 1 ನೇ ಪ್ರತಿವಾದಿಯು ಸಾಮೂಹಿಕ ವಹಿವಾಟಿ ಉಪಭೋಗ ಮಾಡುತ್ತಾ ಬಂದಿದ್ದು ಆ ಆಸ್ತಿಯ ಮೇಲೆ ಸಾಮೂಹಿಕ ಹಕ್ಕನ್ನು ಹೊಂದಿದ್ದು ದಿನಾಂಕ 24-09-2005 ರಂದು ತನ್ನ ತಾಯಿ ದ್ಯಾಮವ್ವ ಮೃತಪಟ್ಟಿದ್ದು ಇವಳಿಗೆ ತಾನು, ವಾದಿ 2, ಪ್ರತಿವಾದಿ 1 ಮಾತ್ರ ವಾರಸುದಾರರಾಗಿದ್ದು ದಾವಾ ಆಸ್ತಿಯಲ್ಲಿ ವಾದಿಯರ ಹಿಸ್ಸೆಯನ್ನು ಎತ್ತಿ ಹಾಕುವ ಸಲುವಾಗಿ 2 ನೇ ಪ್ರತಿವಾದಿಯನ್ನು ದತ್ತಕ ಪಡೆದುಕೊಂಡಿರುವುದಾಗಿ ಎಂದು ಆತನ ಹೆಸರಿನಲ್ಲಿ ವಾದಿಯರ ಬೆನ್ನು ಹಿಂದೆ ಕೆಲವು ಖೊಟ್ಟಿ ಎಂಟ್ರಿ ಮಾಡಿಸಿಕೊಂಡಿರುವರು. 2 ನೇ ಪ್ರತಿವಾದಿಯನ್ನು ದತ್ತಕ ಮಗನಂತೆ ಸಿದ್ದಪಡಿಸಿದಲ್ಲಿ ಸಹ ಆ ಆಸ್ತಿಯು ದತ್ತಕ ಮಗನಿಗೆ ಹೋಗಬೇಕೆಂಬ ಯಾವುದೇ ಕರಾರು ಇರುವುದಿಲ್ಲ. ಆ ದತ್ತಕ ಪತ್ರದಲ್ಲಿಯೂ ಸಹ ನಮೂದಿಸಿರುವುದಿಲ್ಲ.

13. ಪಿಡಬ್ಲೂ-1 ರವರು ಮುಂದುವರೆದು ನುಡಿಯುವುದೇನೆಂದರೆ, ದಿನಾಂಕ 06-07-1988 ರಂದು 2 ನೇ ಪ್ರತಿವಾದಿಯನ್ನು ದತ್ತಕ ಪಡೆದುಕೊಂಡಿರುವರು ಎಂಬ ಸಂಗತಿ ನಿಜವಿರುವುದಿಲ್ಲ ಅದೇರೀತಿ ದಿನಾಂಕ 04-05-1999 ರಂದು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಮೃತ ದುರ್ಗಪ್ಪ ಸಾಕ್ಷಿದಾರರ ಸಮಕ್ಷಮದಲ್ಲಿ ನೊಂದಾಯಿತ ಮೃತ್ಯುಪತ್ರ ಮಾಡಿಕೊಟ್ಟಿರುವನು ಎಂಬ ಸಂಗತಿ ನಿಜವಿರುವುದಿಲ್ಲ. ದುರ್ಗಪ್ಪ ಆರೋಗ್ಯದಿಂದ ಸಂಪೂರ್ಣವಾಗಿ ಬಲಹೀನನಾಗಿದ್ದು ಆತ ಸ್ಮರಣಶಕ್ತಿ ಕಳೆದುಕೊಂಡಿರುವುದರಿಂದ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆಂಬ ಸಂಗತಿ ನಿಜವಿರುವುದಿಲ್ಲ ಈ

ದಾಖಲೆಗಳನ್ನು ಪ್ರತಿವಾದಿಯರು ಸಂಪೂರ್ಣ ಖೊಟ್ಟಿ ಯಾಗಿ ಸೃಷ್ಟಿಸಿಕೊಂಡಿರುವರು. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ತಮ್ಮ ಪಾಲನ್ನು ನೀಡುವಂತೆ ವಿನಂತಿಸಿದಾಗ ಪ್ರತಿವಾದಿಯರು ನಿರಾಕರಿಸಿರುವುದರಿಂದ ಈ ದಾವೆಗೆ ವ್ಯಾಜ್ಯಕಾರಣ ಉಂಟಾಗಿರುವುದೆಂದು ಸಾಕ್ಷಿ ನುಡಿದಿರುವರು.

14. ಪಿಡಬ್ಲೂ-1 ರವರು ತಮ್ಮ ಸಾಕ್ಷ್ಯಕ್ಕೆ ಪೂರಕವಾಗಿ ನಿಶಾನೆ ಪಿ-1 ರಿಂದ 27 ದಾಖಲೆಗಳನ್ನು ಗುರುತಿಸಿಕೊಂಡಿರುವರು. ನಿಶಾನೆ ಪಿ - 1 ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತ 2013-14 ನೇ ಸಾಲಿನ ಪಹಣಿಪತ್ರಿಕೆಯಾಗಿದ್ದು ಸದರಿ ದಾಖಲೆ ಕಾಲಂ ನಂ.9 ಮತ್ತು 12 ರಲ್ಲಿ 2 ನೇ ಪ್ರತಿವಾದಿಯ ಹೆಸರು ದಾಖಲಾಗಿರುವುದು.

ನಿಶಾನೆ ಪಿ-2 ದಾಖಲೆಯು ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ 1975 ರಿಂದ 84 ನೇ ಸಾಲಿನವರೆಗಿನ ಪಹಣಿ ಪತ್ರಿಕೆಯಾಗಿದ್ದು ಸದರಿ ದಾಖಲೆಯ ಕಾಲಂ ನಂ.9 ರಲ್ಲಿ ದುರ್ಗಪ್ಪ ಕಾಳಿ ಎಂದು ದಾಖಲಾಗಿರುವುದು.

ನಿಶಾನೆ ಪಿ-3 ದಾಖಲೆಯು 1993 ರಿಂದ 2000 ವರೆಗಿನ ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ ಪಹಣಿ ಪತ್ರಿಕೆಯಾಗಿದ್ದು ಸದರಿ ದಾಖಲೆಯನ್ನು ಪರಿಶೀಲಿಸಿದಾಗ ದುರ್ಗಪ್ಪ ಮರಿಯಪ್ಪ ಎಂಬುವರ ಹೆಸರು ಕಡಿಮೆ ಮಾಡಿ ಮರಿಯಪ್ಪ ದೊಡ್ಡದುರ್ಗಪ್ಪ ಕಾಳಿ ಎಂಬ ಹೆಸರು ದಾಖಲೆ ಮಾಡಿರುವುದು ಈ ದಾಖಲೆಯಿಂದ ಕಂಡಬರುವುದು.

ನಿಶಾನೆ ಪಿ-4 ದಾಖಲೆಯು ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1921 ರ ದೃಡಿಕೃತ ನಕಲಾಗಿದ್ದು ಸದರಿ ದಾಖಲೆಯನ್ನು ಪರಿಶೀಲಿಸಿದಾಗ ದುರ್ಗಪ್ಪ ಮರಿಯಪ್ಪ ಕಾಳಿ ಇತನು ರಿ ಸ ನಂ.39/2 ಕ ಜಮೀನಿಗೆ ತನ್ನ ದತ್ತಕ ಮಗನಾದ ಮರಿಯಪ್ಪ ದತ್ತಕ ತಂದೆ ದೊಡ್ಡದುರ್ಗಪ್ಪ ಕಾಳಿ ಇತನ ಹೆಸರಿನಲ್ಲಿ ಹಕ್ಕು ಬದಲಾವಣೆಗಾಗಿ ವರದಿಯನ್ನು ದಿನಾಂಕ 28-8-2000 ರಂದು ನೀಡಿದ್ದು ಆ ಪ್ರಕಾರ ದಾಖಲಾಗಿರುವುದು ಈ ದಾಖಲೆಯಿಂದ ಕಂಡುಬರುವುದು.

ನಿಶಾನೆ ಪಿ-5 ರಿಂದ 7 ದಾಖಲೆಯು ಎಮ್ ಆರ್ ನಂ.13/2008-09, ಎಮ್ ಆರ್ ನಂ. ಟಿ 8 ಹಾಗೂ ಎಮ್ ಆರ್ ನಂ.ಟಿ 25 ಈ ದಾಖಲೆಗಳು 2 ನೇ ಪ್ರತಿವಾದಿಯ ಸಾಲ ತೆಗೆದುಕೊಂಡಿರುವ ಬಗ್ಗೆ ಬೊಜಾ ಕೂಡ್ಸಿಸಿರುವ ದಾಖಲೆಗಳಾಗಿರುವುವು.

ನಿಶಾನೆ ಪಿ -8 ದಾಖಲೆಯು ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1041 ರ ದೃಡಿಕೃತ ನಕಲಾಗಿದ್ದು ಅದರಿ ದಾಖಲೆಯ ಪ್ರಕಾರ ರಿ ಸ ನಂ.39/2 ಕ ಜಮೀನನ್ನು ದುರ್ಗಪ್ಪ ಮರಿಯಪ್ಪ ಕಾಳಿ ಇತನು ಹಿರೆಮುಗದೂರ ಗ್ರಾಮದ ಸೇವಾ ಸಹಕಾರಿ ಸಂಘದಲ್ಲಿ ಸಾಲ ತೆಗೆದುಕೊಂಡಿರುವ ಬಗ್ಗೆ ಬೊಜಾ ದಾಖಲು ಮಾಡಿರುವ ದಾಖಲೆಯಾಗಿರುವುದು.

ನಿಪಿ-9 ದಾಖಲೆಯು ದೊಡ್ಡ ದುರ್ಗಪ್ಪನ ಮರಣ ಪ್ರಮಾಣಪತ್ರ,

ನಿಪಿ-10 ದಾಖಲೆಯು ದ್ಯಾಮವ್ವಳ ಮರಣ ಪರಮಾಣಪತ್ರ ,

ನಿಪಿ-11 ದಾಖಲೆಯು ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ 1998 -99 ಸಾಲಿನ ಪಹಣಿ ಪತ್ರಿಕೆಯಾಗಿದ್ದು ಕಾಲಂ 9 ಮತ್ತು 12 ರಲ್ಲಿ ದುರ್ಗಪ್ಪ ಮರಿಯಪ್ಪ ಕಾಳಿ ಇತನ ಹೆಸರು ದಾಖಲಾಗಿರುವುದು ಕಂಡುಬರುವುದು.

ನಿಪಿ-12 ದಾಖಲೆಯು ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ ಗ್ರಾಮ ನಮೂನೆ ನಂ.7, 7 ಅ ಮತ್ತು 12 ರ ದಾಖಲೆಯ ದೃಡಿಕೃತ ನಕಲಾಗಿದ್ದು ಸದರಿ ದಾಖಲೆಯ ಪ್ರಕಾರ ಹನುಮಂತಾಚಾರ್ಯ ವೆಂಕಟರಮಣಚಾರ್ಯ ಪಾಂಡುರಂಗಿ ಇವರ ಹೆಸರನ್ನು ಕಡಿಮೆ ಮಾಡಿ ದುರ್ಗಪ್ಪ ಕಾಳಿ ಹೆಸರು ದಾಖಲು ಮಾಡಿರುವುದು ಈ ದಾಖಲೆಯಿಂದ ಕಂಡುಬರುವುದು.

ನಿಪಿ-13 ದಾಖಲೆಯು ರಿ ಸ ನಂ.39/2 ಕ ಆಸ್ತಿಗೆ ಸಂಬಂದಪಟ್ಟಂತ 1983-89 ನೇ ಸಾಲಿನ ಪಹಣಿ ಪತ್ರಿಕೆಯಾಗಿದ್ದು ಸದರಿ ದಾಖಲೆಯ ಕಾಲಂ ನಂ.9 ಮತ್ತು 12 ರಲ್ಲಿ ದುರ್ಗಪ್ಪ ಮರಿಯಪ್ಪ ಕಾಳಿ ಅಂತಾ ದಾಖಲು ಮಾಡಿರುವರು.

ನಿಪಿ-14 ದಾಖಲೆಯು ರಿ ಸ ನಂ.44 ರ ಜಮೀನು ವಿಸ್ತೀರ್ಣ 18 ಎಕರೆ 34 ಗುಂಟೆಯ ಗ್ರಾಮ ನಮೂನೆ ನಂ.7 ರ ದಾಖಲೆಯಾಗಿದ್ದು ಸದರಿ ದಾಖಲೆಯು 1940 ರಿಂದ 1949 ರ ವರೆಗಿನ ಗ್ರಾಮ ನಮೂನೆ ನಂ.7 ರ ದಾಖಲಾತಿಯಾಗಿದ್ದು ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ದುರ್ಗಪ್ಪ ಕಾಳಿ ಇತನ ಹೆಸರು ದಾಖಲೆ ಮಾಡಿರುವುದು ಈ ದಾಖಲೆಯಿಂದ ಕಂಡುಬರುವುದು

ನಿಪಿ-15 ದಾಖಲೆಯು ರಿ ಸ ನಂ.44 ರ ಜಮೀನಿಗೆ ಸಂಬಂದಪಟ್ಟಂತೆ 1961-67 ವರೆಗಿನ ಗ್ರಾಮ ನಮೂನೆ ನಂ.7, 7 ಅ ಮತ್ತು 12 ರ ದಾಖಲೆಯ ದೃಡಿಕೃತ ನಕಲಾಗಿದ್ದು ಸದರಿ ದಾಖಲೆಯಲ್ಲಿ ಕಬ್ಜೆದಾರ ದುರ್ಗಪ್ಪ ಮರಿಯಪ್ಪ ಕಾಳಿ ಅ. ಕು. ಮ್ಯಾ ದುರ್ಗಪ್ಪ ಅಂತಾ ದಾಖಲು ಮಾಡಿರುವರು.

ನಿಪಿ-16 ದಾಖಲೆಯು ರಿ ಸ ನಂ.44 ರ ವಿಸ್ತೀರ್ಣ 18 ಎಕರೆ 34 ಗುಂಟೆಯ 1983-89 ನೇಸಾಲಿನ ವರೆಗಿನ ಪಹಣಿ ಪತ್ರಿಕೆಯಾಗಿರುವುದು. ಸದರಿ ದಾಖಲೆಯ ಕಾಲಂ ನಂ.9 ಮತ್ತು 12 ರಲ್ಲಿ ಕಾಳಿ ದುರ್ಗಪ್ಪ ಅಂತಾ ದಾಖಲು ಮಾಡಿರುವುದು ಆ ದಾಖೆಯಿಂದ ಕಂಡುಬರುವುದು.

ನಿಪಿ-17 ದಾಖಲೆಯು ದಾಖಲೆಯು 44/2 ವಿಸ್ತೀರ್ಣ 6 ಎಕರೆ ಜಮೀನಿಗೆ ಸಂಬಂದಪಟ್ಟಂತೆ 1985-89 ನೇ ಸಾಲಿನ ಪಹಣಿ ಪತ್ರಿಕೆಯಾಗಿದ್ದು ಸದರಿ ದಾಖಲೆಯ ಕಾಲಂ ನಂ.9 ರಲ್ಲಿ ನಿಂಗಪ್ಪ ಮರಿಯಪ್ಪ ಕಾಳಿ ಇತನ ಹೆಸರು ದಾಖಲು ಮಾಡಿರುವರು.

ನಿಪಿ-18 ದಾಖಲೆಯು ರಿ ಸ ನಂ.44/3 ವಿಸ್ತಿರ್ಣ 6 ಎಕರೆ 34 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ 1985-89 ವರೆಗಿನ ಪಹಣ ಪತ್ರಿಕೆಯಾಗಿದ್ದು ಸದರಿ ದಾಖಲೆಯ ಕಾಲಂ ನಂ.9 ರಲ್ಲಿ ಗುಡ್ಡಪ್ಪ ತಂದೆ ದುರ್ಗಪ್ಪ ಕಾಳಿ ಅಂತಾ ದಾಖಲು ಮಾಡಿರುವರು.

ನಿಪಿ-19 ದಾಖಲೆಯು ಹಕ್ಕು ಬದಲಾವಣೆ ಆದೇಶ ಸಂಖ್ಯೆ 1546 ರ ದಿನಾಂಕ 12-04-1984 ರ ಆದೇಶದ ದೃಡಿಕೃತ ನಕಲಾಗಿದ್ದು ಸದರಿ ದಾಖಲೆಯ ಪ್ರಕಾರ ದುರ್ಗಪ್ಪ ಮರಿಯಪ್ಪ ಕಾಳಿ ಮತ್ತು ಆತನ ಸಹೋದರರು ಕುಟುಂಬದ ಅಸ್ತಿಗಳನ್ನು ಹಂಚಿಕೊಂಡಿದ್ದು ಆ ಪ್ರಕಾರ ವರದಿಯನ್ನು ನೀಡಿದ್ದು ದುರ್ಗಪ್ಪ ಕಾಳಿ ಹಿಸ್ಸಾಗೆ ರಿ ಸ ನಂ.31/1 ರಲ್ಲಿ 5 ಎಕರೆ ಜಮೀನು, ನಿಂಗಪ್ಪ ಮರಿಯಪ್ಪ ಇತನ ಹಿಸ್ಸಾಕ್ಕೆ ರಿ ಸ ನಂ.44/2 ವಿಸ್ತೀರ್ಣ 6 ಎಕರೆ ಜಮೀನು, ದ್ಯಾಮಣ್ಣ ಮರಿಯಪ್ಪ ಕಾಳಿ ಇತನ ಹಿಸ್ಸಾಕ್ಕೆ ರಿ ಸ ನಂ.44/1 ವಿಸ್ತೀರ್ಣ 6 ಎಕರೆ ಹಾಗೂ ಗುಡದಪ್ಪ ದುರ್ಗಪ್ಪ ಕಾಳಿ ರಿ ಸ ನಂ.44/3 ವಿಸ್ತೀರ್ಣ 6 ಎಕರೆ 34 ಗುಂಟೆ ಜಮೀನು ಪಾಲು ವಿಭಾಗ ಮಾಡಿಕೊಂಡಿದ್ದು ಈ ದಾಖ್ಲಲೆಯಿಂದ ಕಂಡುಬರುವುದು.

ನಿಪಿ-20 ದಾಖಲೆಯು ಹಕ್ಕು ಬದಲಾವಣೆ ಆದೇಶ ಸಂಖ್ಯೆ 908 ರ ಪೋಟ ಹಿಸ್ಸಾದ ದಾಖಲಾತಿಯಾಗಿದ್ದು ಸದರಿ ದಾಖಲೆಯ ಪ್ರಕಾರ ರಿ ಸ ನಂ.39/2 ಕ 5 ಎಕರೆಯ ಜಮೀನು ದುರ್ಗಪ್ಪ ಮರಿಯಪ್ಪ ಕಾಳಿ ಹೆಸರು ದಾಖಲಾಗಿರುವುದು ಕಂಡುಬರುವುದು.

ನಿಪಿ-21 ದಾಖಲೆಯು ದಾವಾ ಆಸ್ತಿಯನ್ನು ದುರ್ಗಪ್ಪ ಖರೀದಿ ಮಾಡಿದ ನಂತರ ದುರ್ಗಪ್ಪನ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಿರತಕ್ಕಂತ ಆದೇಶದ ದೃಡಿಕೃತ ನಕಲಾಗಿರುವುದು.

ನಿಪಿ-22 ದಾಖಲೆಯು 1 ನೇ ವಾದಿಯು ಶಾಲೆ ಕಲಿತಿರುವ ಬಗ್ಗೆ ಸರ್ಕಾರಿ ಪ್ರಾಥಮಿಕ ಶಾಲೆ ಹಿರೆಮುಗದೂರು ಇವರು ನೀಡಿರತಕ್ಕಂತ ದೃಡಿಕರಣ ಪತ್ರ ವಾಗಿದ್ದು

ನಿಪಿ-23 ದಾಖಲೆಯು ರಿ ಸ ನಂ.39/2 ಕ ಆಸ್ತಿಗೆ ಸಂಬಂದಪಟ್ಟಂತೆ 2014-15 ನೇ ಸಾಲಿನ ಪಹಣಿ ಪ್ರತಿಕೆಯಾಗಿದ್ದು ಈ ದಾಖಲೆಯ ಪ್ರಕಾರ ದಾವಾ ಜಮೀನು 2 ನೇ ಪ್ರತಿವಾದಿಯ ಹೆಸರು ಕಾಲಂ 9 ಮತ್ತು 12 ರಲ್ಲಿ ದಾಖಲಾಗಿರುವುದು ಕಂಡುಬರುವುದು.

ನಿಪಿ-24 ದಾಖಲೆಯು ಹಕ್ಕು ಬದಲಾವಣೆಯ ಆದೇಶ ಸಂಖ್ಯೆ 254 ರ ಆದೇಶದ ದೃಡಿಕೃತ ನಕಲು

ನಿಪಿ-25 ದಾಖಲೆಯು ಹಕ್ಕು ಬದಲಾವಣೆ ಆದೇಶ ಸಂಖ್ಯೆ1003.

ನಿಪಿ-26 ದಾಖಲೆಯು ಹಕ್ಕು ಬದಲಾವಣೆಯ ಆದೇಶ ಸಂಖ್ಯೆ 1179 ರ ರಿ ಸ ನಂ.44 ಜಮೀನುಗಳಿಗೆ ಸಂಬಂದಪಟ್ಟಿರುವಂತೆ ದಾಖಲಾತಿಗಳಾಗಿರುವುವು ಹಾಗೂ

ನಿಪಿ-27 ದಾಖಲೆಯು ರಿ ಸ ನಂ.777 ರ ಹಕ್ಕು ಬದಲಾವಣೆಯ ಆದೇಶದ ದೃಡಿಕೃತ ನಕಲಾಗಿರುವುದು.

15. ವಾದಿಯರು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ದುರ್ಗಪ್ಪನು ದಾವಾ ಆಸ್ತಿಯನ್ನು ನಿಪಿ-21 ರ ಪ್ರಕಾರ ಖರೀದಿ ಮಾಡಿರುವುದು ಸ್ಪಷ್ಟವಾಗುವುದು. ಅದೇರೀತಿ ನಿಪಿ-19 ರ ಪ್ರಕಾರ ದುರ್ಗಪ್ಪ ಮತ್ತು ಆತನ ಸಹೋದರರು ರಿ ಸ ನಂ.44 ರ ಜಮೀನನ್ನು ಒಳಗೊಂಡಂತೆ ಪಾಲು ವಿಭಾಗ ಮಾಡಿಕೊಂಡಿರುವುದು ಈ ದಾಖಲೆಯಿಂದ ಸ್ಪಷ್ಟವಾಗುವುದು. ಒಂದು ವೇಳೆ ದುರ್ಗಪ್ಪನು ದಾವಾ ಜಮೀನು ಸ್ವಯಾರ್ಜಿತ ಆಸ್ತಿಯಾಗಿದ್ದರೆ ಕುಟುಂಬ ಸದಸ್ಯರ ಮಧ್ಯ ಪಾಲು ವಿಭಾ ಮಾಡಿಕೊಳ್ಳುವ ಸಮಯದಲ್ಲಿ ರಿ ಸ ನಂ.44 ರ ಜಮೀನಿನಲ್ಲಿ ಮಾತ್ರ ವಿಭಾಗ ಮಾಡಿಕೊಳ್ಳುತ್ತಿದ್ದರು. ಆದರೆ ನಿಪಿ-19 ರ ಪ್ರಕಾರ ದಾವಾ ಆಸ್ತಿಯು ದುರ್ಗಪ್ಪನ ಜಂಟಿ ಕುಟುಂಬದ ಆದಾಯದಿಂದ ಖರೀದಿ ಮಾಡಿರತಕ್ಕಂತ ಆಸ್ತಿಯಾಗಿರುವುದರಿಂದ ಆ ಆಸ್ತಿಯಲ್ಲಿ ಹಾಗೂ ಉಳಿದ ಕುಟುಂಬ ಆಸ್ತಿಗಳನ್ನು ಒಳಗೊಂಡಂತೆ ಕುಟುಂಬ ಸದಸ್ಯರೆಲ್ಲರೂ ಪಾಲು ವಿಭಾಗ ಮಾಡಿಕೊಂಡಿರುವರು. ಆದ್ದರಿಂದ ವಾದಿಯರ ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಶೇತಸನದಿ ಜಮೀನಿನಿಂದ ಬಂದ ಆದಾಯದಿಂದ ಕುಟುಂಬದ ಹಿರಿಯ ಮಗನಾದ ದುರ್ಗಪ್ಪನ ಹೆಸರಿನಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು ಆದ್ದರಿಂದ ಆ ಆಸ್ತಿಯು ಪಿತ್ರಾರ್ಜಿತ ಆಸ್ತಿಯೆಂದು ರುಜುವಾತುಪಡಿಸಿರುವರು. ದಾವಾ ಪಂಚಾಯತಿ ಆಸ್ತಿ ನಂ.157/1 ಆಸ್ತಿಯು ವಾದಿಯರು ಮತ್ತು ಪ್ರ್ರತಿವಾದಿ 1 ರವರ ಪಿತ್ರಾರ್ಜಿತ ಆಸ್ತಿ ಎಂಬುದಕ್ಕೆ ಸಂಬಂದಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಈ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ಖಾತಾ ಉತಾರವನ್ನು ಸಹ ಹಾಜರಪಡಿಸಿರುವುದಿಲ್ಲ ಮತ್ತು ಆ ಆಸ್ತಿಯು ವಾದಿಯರ ತಂದೆಯ ಹೆಸರಿನಲ್ಲಿದ್ದ ಬಗ್ಗೆ ಸಹ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರು ದಾವೆಯಲ್ಲಿ ಹಾಜರಾಗಿ ತಮ್ಮ ಲಿಖಿತ ಪತ್ರವನ್ನು ಸಲ್ಲಿಸಿದ್ದು ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸಲು ಯಾವುದೇ ಸಾಕ್ಷಾದಾರಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರಿಗೆ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ಪಿಡಬ್ಲೂ - 1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಆದ್ದರಿಂದ ಪಿಡಬ್ಲೂ-1 ರವರ ಸಾಕ್ಷ್ಯ ಮತ್ತು ವಾದಿಯರು ಹಾಜರುಪಡಿಸಿರುವ ದಾಖಲಾತಿಗಳ ಸಾಕ್ಷ್ಯವನ್ನು ನಿರಾಕರಿಸಲು ಯಾವುದೇ ಬಲಯತವಾದ ಕಾರಣಗಳಿರುವುದಿಲ್ಲ. ಪ್ರತಿವಾದಿಯ ಲಿಖಿತ ಪತ್ರದಲ್ಲಿ ದಾವಾ ಅಸ್ತಿಯು ಮೃತ ದುರ್ಗಪ್ಪನ ಆಸ್ತಿ ಎಂಬುದರ ಬಗ್ಗೆ ನಿರಾಕರಿಸಿರುವುದಿಲ್ಲ ಹಾಗೂ ವಾದಿಯರು ಮತ್ತು 1 ನೇ ಪ್ರತಿವಾದಿಯು ದುರ್ಗಪ್ಪನ ಕಾನೂನು ಬದ್ದವಾದ ವಾರಸುದಾರರು ಎಂದು ಅಲ್ಲಗಳೆದಿರುವುದಿಲ್ಲ. ಆದ್ದರಿಂದ ದುರ್ಗಪ್ಪ ಮೃತಪಟ್ಟ ನಂತರ ಆತನ ಕಾನೂನುಬದ್ದ ವಾರಸುದಾರರು ಮಾಲೀಕತ್ವದ ಹಕ್ಕನ್ನು ವಾರಸಾ ನಾತೆಯಿಂದ ಪಡೆದುಕೊಳ್ಳುವರು. ಪ್ರತಿವಾದಿಯರ ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವಂತೆ 2 ನೇ ಪ್ರತಿವಾದಿಯನವ್ನ ಮೃತ ದುರ್ಗಪ್ಪ

ದತ್ತಕ ಪಡೆದುಕೊಂಡಿರುವುದಾಗಲೀ ಹಾಗೂ ಲಿಖಿತ ಪತ್ರದಲ್ಲಿ ಹೇಲಳಿರುವಂತೆ ದಾವಾ ಆಸ್ತಿಗಳನ್ನು ದುರ್ಗಪ್ಪ 2 ನೇ ಪ್ರತಿವಾದಿಯ ಹೆಸರಿನಲ್ಲಿ ಮೃತ್ಯು ಪತ್ರ ಮಾಡಿಕೊಟ್ಟಿರುವುದನ್ನು ರುಜುವಾತುಪಡಿಸಿರುವುದಿಲ್ಲ ಆದ್ದರಿಂದ 2 ನೇ ಪ್ರತಿವಾದಿಯು ದತ್ತಕ ಮಗನೆಂಬುದನ್ನು ಪ್ರತಿವಾದಿಯರು ರುಜುವಾತುಪಡಿಸದೇ ಇರುವುದರಿಂದ ಆತನು ದಾವಾ ಆಸ್ತಿಯಲ್ಲಿ ಯಾವುದೇ ಪಾಲು ಪಡಯಲು ಅರ್ಹನಾಹಗಿರುವುದಿಲ್ಲ. ಆದ್ದರಿಂದ ವಿವಾದಾಂಶ 1 ಮತ್ತು 2 ನ್ನು ಭಾಗಶಃ ಸಕಾರಾತ್ಮಕವಾಗಿ ಹಾಗೂ ವಿವಾದಾಂಶ 3 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

16. <u>ವಿವಾದಾಂಶಃ **5** ಮತ್ತು **6 -**</u> ಈ ವಿವಾದಾಂಶಗಳನ್ನು ರುಜುವಾತುಪಡಿಸುವ ಭಾರ ಪ್ರತಿವಾದಿಯರ ಮೇಲಿದ್ದು ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ ವಾದಿಯರ ಈ ದಾವೆಗೆ ಅವಶ್ಯಕ ಪಕ್ಷಗಾರರನ್ನು ಸೇರ್ಪಡೆ ಮಾಡಿರುವುದಿಲ್ಲವೆಂದು ಹೇಳಿದ್ದು ಹಾಗೂ ವಾದಿಯರ ದಾವೆಯು ಕಾಲಪರಿಮಿತ ಅಧಿನಿಯಮದಿಂದ ಪ್ರತಿಶೇದಿತವಾಗಿದೆ ಎಂದು ಹೇಳಿದ್ದು ಈ ವಿವಾದಾಂಶಗಳನ್ನು ರುಜುವಾತುಪಡಿಸಲು ಯಾವುದೇ ಸಾಕ್ಷಿಗಳನ್ನು ವಿಚಾರಣೆಗೊಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯರು ವಾದ ಪತ್ರದಲ್ಲಿ ತೋರಿಸಿರುವಂತೆ ವಂಶಾವಳಿಯನ್ನೇ ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ ಸಹ ತೋರಿಸಿದ್ದು ವಾದಿಯರು ದಾವೆಗೆ ವ್ಯಾಜ್ಯ ಕಾರಣ ದಿನಾಂಕ 28-03-2014 ರಂದು ಉಂಟಾಗಿರುವುದಾಗಿ ಎಂದು ಹೇಳಿದ್ದು ಅಂದಿನಿಂದ 3 ವರ್ಷಗಳ ಅವಧಿಯೊಳಗಾಗಿ ದಾವೆ ದಾಖಲು ಮಾಡಿರುವುದು ವಾದ ಪತ್ರದಿಂದ ಸ್ಪಷ್ಟವಾಗುವುದು ಆದ್ದರಿಂದ ಈ ವಿವಾದಾಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ..

17. <u>ಹೆಚ್ಚುವರಿ ವಿವಾದಾಂಶಃ **1**</u> - ಈ ವಿವಾದಾಂಶವನ್ನು ರುಜುವಾತುಪಡಿಸುವ ಭಾರವು ಪ್ರತಿವಾದಿಯರ ಮೇಲೆ ಇದ್ದು ಈ ವಿವಾದಾಂಶವನ್ನು ರುಜುವಾತುಪಡಿಸಲು ಪ್ರತಿವಾದಿಯರು ಯಾವುದೇ ಸಾಕ್ಷ್ಯಾದಾರಗಳನ್ನು ಹಾಜರುಪಡಿಸಿರುವುದಿಲ್ಲ ನಿಶಾನೆ ಪಿ -4 ರ ದಾಖಲೆಯ ಪ್ರಕಾರ 2 ನೇ ಪ್ರತಿವಾದಿಯನ್ನು ದತ್ತಕ ಪಡದುಕೊಂಡಿರುವುದಾಗಿ ಎಂದು ನಮೂದು ಮಾಡಿರುವುದು ಆದರೆ ಅದರಲ್ಲಿನ ಸಂಗತಿಗಳನ್ನು ರುಜುವಾತುಪಡಿಸುವ ಭಾರವು ಪ್ರತಿವಾದಿಯರ ಮೇಲಿದ್ದು ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವಂತೆ 2 ನೇ ಪ್ರತಿವಾದಿಯ್ನನ್ನು ದತ್ತಕ ಪಡೆದುಕೊಂಡಿರುವರು ಬಗ್ಗೆ ದತ್ತಕ ಪತ್ರ ಹಾಜರುಪಡಿಸಿರುವುದಿಲ್ಲ ಅದೇರೀತಿ ದಾವಾ ಅಸ್ತಿಗೆ ಸಂಬಂದಪಟ್ಟಂತೆ ದುರ್ಗಪ್ಪ ದಿನಾಂಕ 04-05-1999 ರಂದು ಮೃತ್ಯು ಪತ್ರ ಬರೆದುಕೊಟ್ಟಿರುವುದಾಗಿ ಎಂದು ಹೇಳಿದ್ದು ಆ ಮೃತ್ಯು ಪತವನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸಾಕ್ಷ್ಯಾದಾರಗಳಿಂದ ರುಜುವಾತುಪಡಿಸಿರುವುದಿಲ್ಲ ಆದ್ದರಿಂದ 2 ನೇ ಪ್ರತಿವಾದಿಯು

ಮೃತ ದುರ್ಗಪ್ಪನ ದತ್ತಕ ಮಗನೆಂದು ರುಜುವಾತುಪಡಿಸಿರುವುದಿಲ್ಲ ಹಾಗೂ ದುರ್ಗಪ್ಪ ಮೃತ್ಯುಪತ್ರವನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯನ್ನು ಬರೆದುಕೊಟ್ಟಿರುವ ಬಗ್ಗೆ ಮೃತ್ಯು ಪತ್ರವನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅದನ್ನು ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ ಹೆಚ್ಚುವರಿ ವಿವಾದಾಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

18. <u>ವಿವಾದಾಂಶಃ **4** ಮತ್ತು **7**</u> - ಈ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಯ ಪುನರಾವರ್ತನೆಯಾಗುವುದನ್ನು ತಪ್ಪಿ ಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

19. ವಾದಿಯರು ದಾವಾ ಜಮೀನು ಆಸ್ತಿಯನ್ನು ಮಾತ್ರ ಪಿತ್ರಾರ್ಜಿತ ಆಸ್ತಿಯೆಂದು ರುಜುವಾತುಪಡಿಸಿರುವುದರಿಂದ ವಾದಿಯರು ಮತ್ತು 1 ನೇ ಪ್ರತಿವಾದಿಯ ವಾದ ಪತ್ರದಲ್ಲಿ ಹೇಳಿರುವಂತೆ ಮೃತ ದುರ್ಗಪ್ಪನ 1 ನೇ ವರ್ಗದ ಕಾನೂನುಬದ್ಧವಾದ ವಾರಸುದಾರರಾಗಿದ್ದು ಹಿಂದೂ ಉತ್ತರಾಧಿಕಾರ ಅನಿಧಿನಿಯಮದ ಪ್ರಕಾರ ವಾದಿ 1, 2 ಮತ್ತು ಪ್ರತಿವಾದಿ 1 ರವರು ಸಮಾನ ಹಿಸ್ಸೆಯನ್ನು ಪಡೆದುಕೊಳ್ಳಲು ಅರ್ಹರಾಗಿರುವರು. ಆದ್ದರಿಂದ ಈ ವಿವಾದಾಂಶಗಳನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

20. <u>ವಿವಾದಾಂಶಃ **8** -</u> ವಾದಿಯರು ದಾವಾ ಜಮೀನು ಆಸ್ತಿಯು ಪಿತ್ರಾರ್ಜಿತ ಆಸ್ತಿಯೆಂಬುದನ್ನು ಮಾತ್ರ ರುಜುವಾತುಪಡಿಸಿರುವುದರಿಂದ ಪ್ರತಿವಾದಿಯರ ತಮ್ಮ ಲಿಖಿತ ಪತ್ರದಲ್ಲಿ ಹೇಳಿರುವಂತ ಸಂಗತಿಗಳನ್ನು ರುಜುವಾತುಪಡಿಸುವಲ್ಲಿ ಯಾವುದೇ ಸಾಕ್ಷಾದಾರಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯರ ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ ದಾವಾ ಆಸ್ತಿ ರಿ ಸ ನಂ.39/2 ಕ ಆಸ್ತಿಯಲ್ಲಿ ಮಾತ್ರ ಪಾಲು ಪಡೆಯಲು ಅರ್ಹರಾಗಿರುವರು ಹಿರೆಮುಗದೂರು ಗ್ರಾಮಪಂಚಾಯತಿ ಆಸ್ತಿ ನಂ.157/1 ರ ಆಸ್ತಿಗೆ ಸಂಬಂದಪಟ್ಟಂತೆ ವಾದಿಯರು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದ್ದಿಲ. ಆದ್ದರಿಂದ ಈ ದಾವಾ ಆಸ್ತಿಯಲ್ಲಿ ಯಾವುದೇ ಪಾಲು ಪಡದುಕೊಳ್ಳಲು ಅರ್ಹರಾಗಿರುವುದಿಲ್ಲ. ಆದ್ದರಿಂದ ಈ ಕೆಳಕಂಡಂತೆ

## <u>ಆದೇಶ</u>

ವಾದಿಯರ ದಾವೆಯನ್ನು ಖರ್ಚು ಸಹಿತ ಭಾಗಶಃ ಪುರಸ್ಕರಿಸಲಾಗಿದೆ.

ವಾದಿಯರು ದಾವಾ ಆಸ್ತಿ ರಿ ಸ ನಂ.39/2 ಕ ವಿಸ್ತೀರ್ಣ 5 ಎಕರೆಯ ಜಮೀನಿನಲ್ಲಿ ಮಾತರ 1/3 ಹಿಸ್ಸೆಯನ್ನು ಪಡೆಯಲು ಅರ್ಹರಾಗಿರುವರು.

ವಾದಿಯರು ದಾವಾ ಆಸ್ತಿಗಳಲ್ಲಿ ತನ್ನ ಹಕ್ಕನ್ನು ಪಡೆಯಲು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 54 ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿ ಆದೇಶಿಸಿದೆ

ದಾವಾ ಆಸ್ತಿ ಕ್ರಮ ಸಂಖ್ಯೆ 2 ರಲ್ಲಿನ ಆಸ್ತಿಗಳಿಗೆ ಸಂಬಂದಪಟ್ಟಂತೆ ವಾದಿಯರ ದಾವೆಯನ್ನುವಜಾಮಾಡಲಾಗಿದೆ.

ಪಕ್ಷಗಾರರು ಅವರವರ ಖರ್ಚುಗಳನ್ನು ಅವರವರೇ ಭರಿಸಿಕೊಳ್ಳತಕ್ಕದ್ದು

ಮೇಲ್ಕಂಡಂತೆ ಡಿಕ್ರಿ ಬರೆಯಲು ಆದೇಶಿಸಿದೆ

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕ 27 ನೇ ಜುಲೈ 2018 ದಿನದಂದು ವಿಧ್ಯುಕ್ತವಾಗಿ ಘೋಷಿಸಲಾಯಿತು).

(ಶ್ರೀ. ವಿಜಯಕುಮಾರ ಕನ್ನೂರ)
ಹಿರಿಯ ದಿವಾಣಿ ನಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಶಿಗ್ಗಾಂವ.

## ಅನುಸೂಚಿ

1. ವಾದಿಯರ ಪರ ಸಾಕ್ಷಿದಾರರ ಪಟ್ಟಿ

ಪಿಡಬ್ಲೂಃ - 1 - ಶ್ರೀಮತಿ ಗಂಗವ್ವ ಕೋಂ ಶಿವಪ್ಪ ಕೆರೆಕೊಪ್ಪ

2. ಪ್ರತಿವಾದಿಯರ ಪರ ಸಾಕ್ಷಿದಾರರ ಪಟ್ಟಿ

ಯಾರೂ ಇಲ್ಲ.

3. ವಾದಿಯರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ

| | | |
|---|---|---|
| ನಿಪಿ - 1 | - | ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತ 2013-14 ನೇ ಸಾಲಿನ ಪಹಣಿಪತ್ರಿಕೆ |
| ನಿಪಿ - 2 | - | ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ 1975 ರಿಂದ 84 ನೇ ಸಾಲಿನವರೆಗಿನ ಪಹಣಿ ಪತ್ರಿಕೆ. |
| ನಿಪಿ - 3 | - | 1993 ರಿಂದ 2000 ವರೆಗಿನ ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ ಪಹಣಿ ಪತ್ರಿಕೆ. |
| ನಿಪಿ - 4 | - | ಹಕ್ಕು ಬದಲಾವಣೆ ಆದೇಶ ಸಂಖ್ಯೆ 1921 ರ ದೃಡಿಕೃತ ನಕಲು |
| ನಿಪಿ - 5 ರಿಂದ 7 | - | ಎಮ್ ಆರ್ ನಂ.13/2008-09, ಎಮ್ ಆರ್ ನಂ. ಟಿ 8 ಹಾಗೂ ಎಮ್ ಆರ್ ನಂ.ಟಿ 25 ದಾಖಲೆಗಳು |
| ನಿಪಿ - 8 | - | ಹಕ್ಕು ಬದಲಾವಣೆ ಆದೇಶ ಸಂಖ್ಯೆ 1041 ರ ದೃಡಿಕೃತ ನಕಲು |
| ನಿಪಿ - 9 | - | ದೊಡ್ಡ ದುರ್ಗಪ್ಪನ ಮರಣ ಪ್ರಮಾಣಪತ್ರ, |

| | | |
|---|---|---|
| ನಿಪಿ - 10 | - | ದ್ಯಾಮವ್ವಳ ಮರಣ ಪರಮಾಣಪತ್ರ , |
| ನಿಪಿ - 11 | - | ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ 1998 -99 ಸಾಲಿನ ಪಹಣಿ ಪ್ರತ್ರಿಕೆ |
| ನಿಪಿ - 12 | - | ರಿ ಸ ನಂ.39/2 ಕ ಜಮೀನಿಗೆ ಸಂಬಂದಪಟ್ಟಂತೆ ಗ್ರಾಮ ನಮೂನೆ ನಂ.7, 7 ಅ ಮತ್ತು 12 ರ ದಾಖಲೆಯ ದೃಡಿಕೃತ ನಕಲು |
| ನಿಪಿ - 13 | - | ರಿ ಸ ನಂ.39/2 ಕ ಆಸ್ತಿಗೆ ಸಂಬಂದಪಟ್ಟಂತ 1983-89 ನೇ ಸಾಲಿನ ಪಹಣಿ ಪ್ರತ್ರಿಕೆ |
| ನಿಪಿ - 14 | - | ರಿ ಸ ನಂ.44 ರ ಜಮೀನು ವಿಸ್ತೀರ್ಣ 18 ಎಕರೆ 34 ಗುಂಟೆಯ ಗ್ರಾಮ ನಮೂನೆ ನಂ.7 ರ ದಾಖಲೆ. |
| ನಿಪಿ - 15 | - | ರಿ ಸ ನಂ.44 ರ ಜಮೀನಿಗೆ ಸಂಬಂದಪಟ್ಟಂತೆ 1961-67 ವರೆಗಿನ ಗ್ರಾಮ ನಮೂನೆ ನಂ.7, 7 ಅ ಮತ್ತು 12 ರ ದಾಖಲೆಯ ದೃಡಿಕೃತ ನಕಲು |
| ನಿಪಿ - 16 | - | ರಿ ಸ ನಂ.44 ರ ವಿಸ್ತೀರ್ಣ 18 ಎಕರೆ 34 ಗುಂಟೆಯ 1983-89 ನೇಸಾಲಿನ ವರೆಗಿನ ಪಹಣಿ ಪ್ರತ್ರಿಕೆ |
| ನಿಪಿ - 17 | - | ರಿ ಸ ನಂ. 44/2 ವಿಸ್ತೀರ್ಣ 6 ಎಕರೆ ಜಮೀನಿಗೆ ಸಂಬಂದಪಟ್ಟಂತೆ 1985-89 ನೇ ಸಾಲಿನ ಪಹಣಿ ಪ್ರತ್ರಿಕೆ |
| ನಿಪಿ - 18 | - | ರಿ ಸ ನಂ.44/3 ವಿಸ್ತಿರ್ಣ 6 ಎಕರೆ 34 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ 1985-89 ವರೆಗಿನ ಪಹಣ ಪ್ರತ್ರಿಕೆ |
| ನಿಪಿ - 19 | - | ಹಕ್ಕು ಬದಲಾವಣೆ ಆದೇಶ ಸಂಖ್ಯೆ 1546 ರ ದಿನಾಂಕ 12-04-1984 ರ ಆದೇಶದ ದೃಡಿಕೃತ ನಕಲು |
| ನಿಪಿ - 20 | - | ಹಕ್ಕು ಬದಲಾವಣೆ ಆದೇಶ ಸಂಖ್ಯೆ 908 ರ ಪೋಟ ಹಿಸ್ಸಾದ ದಾಖಲಾತಿ |
| ನಿಪಿ - 21 | - | ದಾವಾ ಆಸ್ತಿಯನ್ನು ದುರ್ಗಪ್ಪ ಖರೀದಿ ಮಾಡಿದ ನಂತರ ದುರ್ಗಪ್ಪನ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಿರತಕ್ಕಂತ ಆದೇಶದ ದೃಡಿಕೃತ ನಕಲು |
| ನಿಪಿ - 22 | - | 1 ನೇ ವಾದಿಯು ಶಾಲೆ ಕಲಿತಿರುವ ಬಗ್ಗೆ ಸರ್ಕಾರಿ ಪ್ರಾಥಮಿಕ ಶಾಲೆ ಹಿರೆಮುಗದೂರು ಇವರು ನೀಡಿರತಕ್ಕಂತೆ ದೃಡಿಕರಣ ಪತ್ರ. |
| ನಿಪಿ - 23 | - | ರಿ ಸ ನಂ.39/2 ಕ ಆಸ್ತಿಗೆ ಸಂಬಂದಪಟ್ಟಂತೆ 2014-15 ನೇ ಸಾಲಿನ ಪಹಣಿ ಪ್ರತಿಕೆ |
| ನಿಪಿ - 24 | - | ಹಕ್ಕು ಬದಲಾವಣೆಯ ಆದೇಶ ಸಂಖ್ಯೆ 254 ರ ಆದೇಶದ ದೃಡಿಕೃತ ನಕಲು |
| ನಿಪಿ - 25 | - | ಹಕ್ಕು ಬದಲಾವಣೆ ಆದೇಶ ಸಂಖ್ಯೆ1003 |
| ನಿಪಿ - 26 | - | ಹಕ್ಕು ಬದಲಾವಣೆಯ ಆದೇಶ ಸಂಖ್ಯೆ 1179 |
| ನಿಪಿ - 27 | - | ರಿ ಸ ನಂ.777 ರ ಹಕ್ಕು ಬದಲಾವಣೆಯ ಆದೇಶದ ದೃಡಿಕೃತ ನಕಲು. |

3. <u>ಪ್ರತಿವಾದಿಯರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ</u>

ಏನೂ ಇಲ್ಲ

ಹಿರಿಯ ದಿವಾಣಿ ನಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಶಿಗ್ಗಾಂವ.